# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 37 |
| ಸದಸ್ಯರ ಹೆಸರು | : | ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 12-09-2022 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ವಿದ್ಯುತ್ ಕಂಪನಿಗಳು ರೈತರ ಕೊಳವೆ ಬಾವಿಗಳಿಗೆ ವಿದ್ಯುತ್‌ನ್ನು ಪೂರೈಸಲು ಹೊಸ ಟಿ.ಸಿ.ಗಳನ್ನು ಮತ್ತು ಹೊಸ ಸಂಪರ್ಕಗಳನ್ನು ಪಡೆಯಲು ಅನುಸರಿಸಬೇಕಾಗಿರುವ ಕ್ರಮಗಳೇನು; | ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕುರಿತು ಇಎನ್/41/ವಿಎಸ್‌ಸಿ/2014 ದಿನಾಂಕ 14/07/2014 ಮತ್ತು ದಿನಾಂಕ:23.07.2014 ರಂದು ಸುತ್ತೋಲೆ ಹೊರಡಿಸಲಾಗಿದ್ದು, ಅಕ್ರಮ ಸಕ್ರಮ ಹಾಗೂ ಹೊಸದಾಗಿ ನೊಂದಾಯಿಸಲ್ಪಡುವ ಅರ್ಜಿಗಳು ಎಂಬ ಬೇಧವಿಲ್ಲದೆ ನೊಂದಾಯಿಸಲ್ಪಡುವ ಎಲ್ಲಾ ಅರ್ಜಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಸೂಚಿಸಲಾಗಿರುತ್ತದೆ. ಸದರಿ ಆದೇಶದಂತೆ ರೂ.10,000/- ಹಾಗೂ ಠೇವಣಿ ಹಣ ಪಾವತಿಸಿರುವ ರೈತರ ಸ್ಥಳ ಪರಿಶೀಲನೆ ಮಾಡಿದ ನಂತರ ಪಂಪ್‌ಸೆಟ್‌ಗೆ ಸನಿಹ ಇರುವ ವಿದ್ಯುತ್ ಮಾರ್ಗದ ಲಭ್ಯತೆ ಮತ್ತು ಪರಿವರ್ತಕದ ಹಾಲಿ ಇರುವ ಹೊರೆಯನ್ನು ಪರಿಶೀಲಿಸಿ ತಾಂತ್ರಿಕ ಸಾಧ್ಯತೆಗೆ ಅನುಗುಣವಾಗಿ ಸರ್ವೀಸ್ ಮೇನ್ ಮೂಲಕ/ ಎಲ್.ಟಿ. ಮಾರ್ಗ ವಿಸ್ತರಣೆ/ ಅವಶ್ಯಕತೆ ಇರುವಲ್ಲಿ ಹೊಸ ಪರಿವರ್ತಕ ಅಳವಡಿಸಲು ಜೇಷ್ಠತಾ ಪಟ್ಟಿ ಅನುಸಾರ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿದೆ.<br>ಶೀಘ್ರ ಸಂಪರ್ಕ ಯೋಜನೆಯಡಿ ವಿದ್ಯುತ್ ಸಂಪರ್ಕ ಪಡೆಯಲು ಇಚ್ಛಿಸಿದ ರೈತರು ಸ್ವಯಂ ಕಾರ್ಯ ನಿರ್ವಹಣಾ ಯೋಜನೆಯಡಿಯಲ್ಲಿ ಮೂಲಸೌಕರ್ಯ ರಚಿಸಿಕೊಳ್ಳಬೇಕಾಗಿರುತ್ತದೆ, ಪರಿವರ್ತಕ ಅಗತ್ಯವಿದ್ದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳ ವತಿಯಿಂದ 25 ಕೆವಿ ಪರಿವರ್ತಕವನ್ನು ಒದಗಿಸಲಾಗುವುದು. |
| ಆ) | ರಾಜ್ಯದಲ್ಲಿ ವಿದ್ಯುತ್ ಕಂಪನಿಗಳು ರೈತರ ಕೊಳವೆ ಬಾವಿಗಳಿಗೆ ವಿದ್ಯುತ್‌ನ್ನು ಪೂರೈಸಲು ಹೊಸ ಟಿ.ಸಿ.ಗಳನ್ನು ಮತ್ತು ಹೊಸ ಸಂಪರ್ಕಗಳನ್ನು ಪಡೆಯಲು ಗುತ್ತಿಗೆದಾರರು ನಿಗದಿಪಡಿಸುತ್ತಿರುವ ಬೆಲೆ ಎಷ್ಟು; | ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ರೈತರ ನೀರಾವರಿ ಪಂಪ್ ಸೆಟ್ಟುಗಳಿಗೆ ಅಗತ್ಯ ವಿದ್ಯುತ್ ಮೂಲಭೂತ ಸೌಕರ್ಯ ಕಲ್ಪಿಸಲು ಪೂರ್ಣ ಗುತ್ತಿಗೆ ಆಧಾರದಲ್ಲಿ ಟೆಂಡರ್ ಕರೆದು ವಿವಿಧ ಗುತ್ತಿಗೆದಾರರಿಗೆ ಅವಾರ್ಡ್ ನೀಡಲಾಗುತ್ತಿದೆ. Detailed Work Award (DWA) ನಲ್ಲಿ ನಿಗದಿಪಡಿಸಲಾದ ದರದನ್ವಯ ಗುತ್ತಿಗೆದಾರರಿಗೆ ಹಣವನ್ನು ವಿದ್ಯುತ್ ಸರಬರಾಜು ಕಂಪನಿಗಳ ವತಿಯಿಂದ ಪಾವತಿಸಲಾಗುವುದು. |

....2

<table>
<tr>
<td>ಇ)</td>
<td>ಗುತ್ತಿಗೆದಾರರು ನಿಗದಿಪಡಿಸುವ ಬೆಲೆಗಳನ್ನು ನೀಡಲಾಗದೆ ರೈತರು ಸಂಕಷ್ಟ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td>
<td>ಕೆ.ಟಿ.ಪಿ.ಪಿ.ಯ ನಿಯಮಾನುಸಾರ ಟೆಂಡರ್ ಕರೆದು ದರಗುತ್ತಿಗೆಯ ಪ್ರಕಾರ ಗುತ್ತಿಗೆದಾರರಿಗೆ ಬಿಲ್ ಗಳ ಮೊತ್ತವನ್ನು ವಿದ್ಯುತ್ ಸರಬರಾಜು ಕಂಪನಿಗಳ ವತಿಯಿಂದಲೇ ಪಾವತಿ ಮಾಡಲಾಗುತ್ತದೆ. ಆದ್ದರಿಂದ ರೈತರು ಗುತ್ತಿಗೆದಾರರಿಗೆ ಯಾವುದೇ ಹಣವನ್ನು ನೀಡುವ ಅವಶ್ಯಕತೆಯಿರುವುದಿಲ್ಲ.</td>
</tr>
<tr>
<td>ಈ)</td>
<td>ಹೊಸ ಟಿ.ಸಿ.ಗಳನ್ನು ಮತ್ತು ಹೊಸ ಸಂಪರ್ಕಗಳನ್ನು ಪಡೆಯಲು ಸರ್ಕಾರ ಸೂಕ್ತ ಬೆಲೆಯನ್ನು ನಿಗದಿಪಡಿಸಲು ಕ್ರಮ ಕೈಗೊಂಡಿದೆಯೇ; ಕೈಗೊಂಡಿದ್ದಲ್ಲಿ ಇದಕ್ಕೆ ಬೇಕಾಗುವ ಕಾಲಾವಕಾಶವೆಷ್ಟು?</td>
<td>ಸರ್ಕಾರದ ಸುತ್ತೋಲೆ ಸಂಖ್ಯೆ: ಇಎನ್ 41 ವಿಎಸ್‌ಸಿ 2014/ಪಿ1, ದಿನಾಂಕ:14.07.2014 ರನ್ವಯ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಅರ್ಜಿದಾರರು ನೊಂದಣಿ ಶುಲ್ಕ ರೂ.10,000/-ಗಳ ಮೂಲ ಸೌಕರ್ಯಗಳ ಶುಲ್ಕ ಹಾಗೂ ಠೇವಣಿ ಮೊತ್ತವನ್ನು ಪಾವತಿಸಬೇಕಾಗಿರುತ್ತದೆ.<br><br>ವಿಸಕಂಗಳು ಪ್ರತಿ ಹೆಚ್.ಪಿ(HP) ಗೆ ನಿಗದಿಪಡಿಸಿರುವ ಭದ್ರತಾ ಠೇವಣಿಯು ಈ ಕೆಳಕಂಡಂತಿದೆ:<br><br>
<table>
<tr><th>ಬೆಸ್ಕಾಂ</th><th>ಮೆಸ್ಕಾಂ</th><th>ಸೆಸ್ಕ್</th><th>ಹೆಸ್ಕಾಂ</th><th>ಜೆಸ್ಕಾಂ</th></tr>
<tr><td>1290/-</td><td>1240/-</td><td>1280/-</td><td>1390/-</td><td>1280/-</td></tr>
</table>
<br>ಅರ್ಜಿದಾರರು ಠೇವಣಿ ಮೊತ್ತ ಹಾಗೂ ಇತರೆ ಶುಲ್ಕಗಳನ್ನು ಪಾವತಿಸಿದ ನಂತರ ಜೇಷ್ಠತೆಯ ಆಧಾರದಲ್ಲಿ ಮೂಲಭೂತ ಸೌಕರ್ಯವನ್ನು ರಚಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು.</td>
</tr>
</table>

ಸಂಖ್ಯೆ: ಎನರ್ಜಿ 181 ಇಬಿಎಸ್ 2022

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು